ನಿ –5404 50

ಇ) 1 ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ
2 ಎನ್‌ಜಿಇಎಫ್, ಬೆಂಗಳೂರು
3 ಮೈಸೂರು ಕ್ರೋಂ ಟ್ಯಾನಿಂಗ್ ಕಂ ನಿಯಮಿತ

ಈ) 2005–06ನೇ ಸಾಲಿನಲ್ಲಿ–

	(ರೂ ಲಕ್ಷಗಳಲ್ಲಿ)
1 ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ನಿ	423 73
2 ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿ	76 72
3 ಕರ್ನಾಟಕ ಸಾಬೂನು & ಮಾರ್ಜಕ	255 72
4 ಎನ್‌ಜಿಇಎಫ್ (ಹುಬ್ಬಳ್ಳಿ) ನಿ	54 80

ಉ) ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಷೇರು ಬಂಡವಾಳದ ಶೇ 51ರಷ್ಟು ಭಾಗವನ್ನು ಓರ್ವ ಆಯಕಟ್ಟಿನ ಪಾಲುದಾರರಿಗೆ ನೀಡಿ, ಎನ್‌ಜಿಇಎಫ್‌ನ ಮೋಟಾರ್ಸ್ ಹಾಗೂ ಟ್ರಾನ್ಸ್‌ಫಾರ್ಮರ್ ವಿಭಾಗಗಳನ್ನು ಪುನಃಶ್ಚೇತನಗೊಳಿಸುವ ಬಗ್ಗೆ ಸರ್ಕಾರವು ಉದ್ದೇಶಿಸಿದೆ ಇದಕ್ಕಾಗಿ ಸರ್ಕಾರದಿಂದ ಯಾವುದೇ ವೆಚ್ಚ ಮಾಡುವ ಅವಶ್ಯಕತೆಯಿರುವುದಿಲ್ಲ

ಊ) ಯಾವುದೂ ಇಲ್ಲ
ಉದ್ಭವಿಸುವುದಿಲ್ಲ

854(508) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬನ್ನೇರುಘಟ್ಟದ ಬಳಿ ವಿಜ್ಞಾನ ನಗರವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದರೆ, ಈ ಹಿಂದೆ ಬನ್ನೇರುಘಟ್ಟದ ಬಳಿ ವಿಜ್ಞಾನ ನಗರವನ್ನು ಸ್ಥಾಪಿಸಲು ಸರ್ಕಾರ ನಿರ್ಧಾರ ಕೈಗೊಂಡು ಅದನ್ನು ಕೈಬಿಟ್ಟು ಹೆಸರುಘಟ್ಟದ ಬಳಿ ಸ್ಥಾಪಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು ನಿಜವೇ?

ಇ) ಬನ್ನೇರುಘಟ್ಟದ ಉದ್ದೇಶಿತ ಸ್ಥಳ ಅರಣ್ಯ ಸಂರಕ್ಷಿತ ಪ್ರದೇಶವಾಗಿದ್ದು, ವಿಜ್ಞಾನ ನಗರ ನಿರ್ಮಿಸುವುದರಿಂದ ಪರಿಸರ ಹಾಗೂ ಪ್ರಾಣಿಗಳಿಗೆ ತೊಂದರೆಯಾಗುವುದಿಲ್ಲವೇ?

ಈ) ಇದಕ್ಕಾಗಿ 2007–08ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಹಣವೆಷ್ಟು ?

ಶ್ರೀ ರಾಮಚಂದ್ರ ಗೌಡ (ಯೋಜನೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಹೌದು

ಆ) ಹೌದು

2002–03ನೇ ಸಾಲಿನಲ್ಲಿ ಕೊಲ್ಕತ್ತಾ ನಗರದಲ್ಲಿರುವ ವಿಜ್ಞಾನ ನಗರ ದೇಶದಲ್ಲಿಯೇ ಖ್ಯಾತಿ ಪಡೆದಿದ್ದು, ಅದೇ ಮಾದರಿಯಲ್ಲಿಯೇ ಬೆಂಗಳೂರಿನಲ್ಲಿಯೂ ವಿಜ್ಞಾನ ನಗರ ನಿರ್ಮಿಸಲು ಮಾನ್ಯ ಹಿಂದಿನ ಸಚಿವರಾದ (ಮಾಜಿ) ನಫೀಜ ಫಜಲ್ ರವರ ಅಧ್ಯಕ್ಷತೆಯಲ್ಲಿ ತೀರ್ಮಾನಿಸಲಾಗಿತ್ತು ಅದರಂತೆ, ಬೆಂಗಳೂರು ನಗರದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪಕ್ಕದಲ್ಲಿರುವ ತರಳು ಗ್ರಾಮದ (ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ) ಸರ್ವೆ ನಂ 55ರಲ್ಲಿ 253 ಎಕರೆ ಪೈಕಿ 100 ಎಕರೆ ವಿಸ್ತೀರ್ಣ ಜಮೀನನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 455 ಎಲ್‌ಜಿ ಬಿ 2001 ದಿ 16 12 2002ರಲ್ಲಿ ಹಂಚಿಕೆ ಮಾಡಲಾಗಿತ್ತು

ಆದರೆ, ಸದರಿ ಜಮೀನು ಸಿ ಆರ್ ಪಿ ಎಫ್ ನವರ ವಶದಲ್ಲೇ ಇದ್ದುದರಿಂದ ಹಾಗೂ ಕೆಲವು ಭೂಮಾಲೀಕರು ಕಂದಾಯ ಇಲಾಖೆಯ ಆದೇಶದ ಮೇಲೆ ರಾಜ್ಯ ಸಿವಿಲ್ ಕೋರ್ಟ್‌ನಲ್ಲಿ ಓ ಎಸ್ ನಂ 145/97, 211/97 ಮೊಕದ್ದಮೆಯನ್ನು ಹೂಡಿದ್ದು, ಅದು ಇತ್ಯರ್ಥವಾಗದೇ ಬಾಕಿಯಿದ್ದ ಕಾರಣ, ಭೌತಿಕವಾಗಿ ಈ ಜಮೀನು ಈ ಇಲಾಖೆಯ ಸ್ವಾಧೀನಕ್ಕೆ ಅಂದು ಸುಪರ್ದಿಗೆ ತೆಗೆದುಕೊಳ್ಳವುದಕ್ಕೆ ಸಾಧ್ಯವಾಗಲಿಲ್ಲ

ಆದರೆ, ವಿಜ್ಞಾನ ನಗರ ಸ್ಥಾಪಿಸುವುದನ್ನು 10ನೇ ಪಂಚವಾರ್ಷಿಕ ಯೋಜನೆಯು ಮುಕ್ತಾಯವಾಗುವ ಅವಧಿಯೊಳಗೆ ಅನುಷ್ಠಾನಗೊಳಿಸಬೇಕೆಂಬ ಉದ್ದೇಶ ಹೊಂದಿದ್ದುದರಿಂದ, ಹಿಂದಿನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ನಿರ್ದೇಶನದ ಮೇರೆಗೆ ಪರ್ಯಾಯ ಜಮೀನನ್ನು ಪಡೆಯಲು ಹೆಸರುಘಟ್ಟ ಬಳಿ ಕರ್ನಾಟಕ ಚಲನಚಿತ್ರೋದ್ಯಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಸ್ವಾಧೀನದಲ್ಲಿರುವ 343 ಎಕರೆ ಜಮೀನಿನ ಪೈಕಿ 100 ಎಕರೆ ಜಮೀನನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ವರ್ಗಾಯಿಸುವಂತೆ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಇಲಾಖೆಯಲ್ಲಿ ಕೋರಲಾಗಿತ್ತು ಆದರೆ, ಸದರಿ ನಿಗಮದವರು 100 ಎಕರೆ ಜಮೀನನ್ನು ವರ್ಗಾಯಿಸಲು ಒಪ್ಪದಿದ್ದ ಕಾರಣ, ಈ ಮೊದಲು ಬೆಂಗಳೂರು ವಿಜ್ಞಾನ ನಗರ ಸ್ಥಾಪಿಸಬೇಕೆಂದು ನಿರ್ಧರಿಸಿದ ಬನ್ನೇರುಘಟ್ಟದ ಸಮೀಪ ಸ್ಥಾಪಿಸಲು ಪುನರ್–ತೀರ್ಮಾನ ಕೈಗೊಳ್ಳಲಾಯಿತು ಅದರಂತೆ, ಕಂದಾಯ ಇಲಾಖೆಯು ಈ ಇಲಾಖೆಗೆ 100 ಎಕರೆ ಜಮೀನನ್ನು ವರ್ಗಾಯಿಸಿದ್ದು, ಅದನ್ನು ಇಲಾಖೆಯ ಸುರ್ಪದಿಗೆ ತೆಗೆದುಕೊಳ್ಳಲು ಈಗಾಗಲೇ ಎಲ್ಲಾ ಕ್ರಮ ಕೈಗೊಳ್ಳಲಾಗುತ್ತಿದೆ

ಅಲ್ಲದೆ, ಈ ಜಾಗದ ಸುತ್ತ ಕಾಂಪೌಂಡು ಗೋಡೆ ಕಟ್ಟಿಸಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ

ಇತ್ತೀಚೆಗೆ ಮಾನ್ಯ ಯೋಜನಾ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ನೇತೃತ್ವದಲ್ಲಿ ಒಂದು ನಿಯೋಗ ಕೇಂದ್ರ ಸರ್ಕಾರದ ಮಾನ್ಯ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರನ್ನು ಭೇಟಿ ಮಾಡಿ ಕೇಂದ್ರ ಸರ್ಕಾರದಿಂದ ಸಮಾನ ಅನುಪಾತದಂತೆ (50 50ರಂತೆ) ರೂ 35 00 ಕೋಟಿಗಳನ್ನು ಕೇಂದ್ರ ಸರ್ಕಾರದಿಂದ ನೀಡಲು ಒಪ್ಪಿಗೆ ನೀಡುವಂತೆ ಕೋರಲಾಗಿದ್ದು, ವಿಜ್ಞಾನ ನಗರ ಸ್ಥಾಪನೆಗೆ ಒಟ್ಟು ಅಂದಾಜು ವೆಚ್ಚ ರೂ 70 00 ಕೋಟಿಗಳಾಗಿರುತ್ತದೆ ಆದರೆ, ಈ ಹಿಂದೆ ಕೇಂದ್ರ ಸರ್ಕಾರ 13% (ರೂ 9 1 ಕೋಟಿಗಳು), ರಾಜ್ಯ ಸರ್ಕಾರ 13% (ರೂ 9 1 ಕೋಟಿಗಳು) ಮತ್ತು ಉಳಿದ 7% (ರೂ 51 8 ಕೋಟಿಗಳು) ಖಾಸಗಿ ಉದ್ಯಮಿದಾರರು (ರಾಜ್ಯ ಸರ್ಕಾರ ಗುರುತಿಸಿದ ಇನ್ಯಾವುದೇ ಸಂಸ್ಥೆ) ತೆಗೆದುಕೊಂಡು ನಿರ್ಮಿಸುವ ಉದ್ದೇಶವಿತ್ತು ಆದರೆ, ಖಾಸಗಿ ಉದ್ಯಮಿದಾರರಿಂದ 74% ಅಂದರೆ ರೂ 51 8 ಕೋಟಿಗಳ ಬಂಡವಾಳವನ್ನು ತೆಗೆದುಕೊಳ್ಳುವುದು ಕಷ್ಟವಾಗುವುದರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರ ಸಮಾನ ಅನುಪಾತದಂತೆ ಅನುದಾನ ನೀಡುವ ಬಗ್ಗೆ ಚಿಂತಿಸಿ ಆ ಪ್ರಕಾರ (50% 50%) ಕ್ರಮಕೈಗೊಳ್ಳಲಾಗುತ್ತಿದೆ

ಬನ್ನೇರುಘಟ್ಟದ ಉದ್ಯಾನವನದ ಸಮೀಪ ಸ್ಥಾಪಿಸಲು ಉದ್ದೇಶಿಸಿರುವ ವಿಜ್ಞಾನ ನಗರ ಯಾವುದೇ ರೀತಿಯಲ್ಲೂ ಪರಿಸರಕ್ಕೆ ಮತ್ತು ಪ್ರಾಣಿಗಳಿಗೆ ಹಾನಿಯುಂಟು ಮಾಡುವುದಿಲ್ಲ ಏಕೆಂದರೆ, ವಿಜ್ಞಾನ ನಗರವನ್ನು ಪರಿಸರ ಸ್ನೇಹಿ ಪರಿಕಲ್ಪನೆ ಆಧಾರದಲ್ಲಿ ಸ್ಥಾಪಿಸಲು ಉದ್ದೇಶಿಸಿರುವುದರಿಂದ ಶಬ್ದ ಮಾಲಿನ್ಯವಾಗಲಿ ಅಥವಾ ಇನ್ಯಾವುದೇ ಪರಿಸರ ಮಾಲಿನ್ಯ ಅಥವಾ ಜೀವ ಸಂಕುಲಕ್ಕೆ ದಕ್ಕೆಯಾಗದಂತೆ ಸ್ಥಾಪಿಸಲಾಗುವುದು ಉದ್ದೇಶಿತ ವಿಜ್ಞಾನ ನಗರದಲ್ಲಿ ಜೀವಿ ಉದ್ಯಾನವನ ಹಾಗೂ ಪರಿಸರ ಸ್ನೇಹಿ ಉದ್ಯಾನವನಗಳನ್ನು ಸ್ಥಾಪಿಸುವುದರಿಂದ ಪರಿಸರಕ್ಕೆ ಪೂರಕವಾಗಿದ್ದು, ಪ್ರಾಣಿಗಳಿಗಾಗಲೀ, ಸುತ್ತಮುತ್ತಲಿನ ಪರಿಸರಕ್ಕಾಗಲೀ ಯಾವುದೇ ತೊಂದರೆಯಾಗುವುದಿಲ್ಲ

ಈ) ವಿಜ್ಞಾನ ನಗರಗಳ ಸ್ಥಾಪನೆಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೇಂದ್ರದ ಸಹಾಯಾನುದಾನದೊಂದಿಗೆ ರಾಜ್ಯ ಸರ್ಕಾರದ ಅನುದಾನವನ್ನು ಸೇರಿಸಿ ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿದೆ ಹಾಗೂ ವರ್ಷವಾರು ಹಂತ ಹಂತವಾಗಿ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾಗಿದೆ ಆದಕಾರಣ ಕೇಂದ್ರದ ಅನುದಾನವನ್ನು ನಿರೀಕ್ಷಿಸಿ ರಾಜ್ಯ ಸರ್ಕಾರದಿಂದ ಈ ಯೋಜನೆಯನ್ನು 2008–09ನೇ ಸಾಲಿನಲ್ಲಿ ಮೊದಲನೇ ಹಂತವಾಗಿ ಪ್ರಾರಂಭಿಸಲು ಆಯವ್ಯಯವನ್ನು ಮೀಸಲಿಡಲು ವಾರ್ಷಿಕ ಯೋಜನೆಯಲ್ಲಿ (Annual Plan) ಅಳವಡಿಸಲು ಕ್ರಮ

ವಹಿಸಲಾಗುತ್ತಿದೆ ಈ ಹಿನ್ನೆಲೆಯಲ್ಲಿ 2007–08ನೇ ಸಾಲಿನ ಆಯವ್ಯಯದಲ್ಲಿ ಹಣವನ್ನು ಮೀಸಲಿಟ್ಟಿರುವುದಿಲ್ಲ

856(510) ಶ್ರೀ ವಿ ಸೋಮಣ್ಣ (ಬಿನ್ನಿಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೈಸೂರು ಲ್ಯಾಂಪ್ಸ್ ಕಾರ್ಖಾನೆಯು ಇಲ್ಲಿಯವರೆಗೆ ಅನುಭವಿಸಿದ ನಷ್ಟವೆಷ್ಟು,

ಆ) ಈ ಕಾರ್ಖಾನೆಗೆ ಸೇರಿದ ಜಮೀನಿನ ವಿಸ್ತೀರ್ಣವೆಷ್ಟು,

ಇ) ಈ ಜಮೀನಿನ ಇಂದಿನ ಅಂದಾಜು ಬೆಲೆ ಎಷ್ಟು ,

ಈ) ಈ ಕಾರ್ಖಾನೆಯಲ್ಲಿದ್ದ ನೌಕರರ ಸಂಖ್ಯೆ ಎಷ್ಟು ಹಾಗೂ ಈಗ ಇರುವ ನೌಕರರ ಸಂಖ್ಯೆ ಎಷ್ಟು ,

ಉ) ಈ ಕಾರ್ಖಾನೆಯು ನಷ್ಟ ಅನುಭವಿಸಲು ಕಾರಣವೇನು,

ಊ) ಈ ಕಾರ್ಖಾನೆಯನ್ನು ಪುನರಾರಂಭಗೊಳಿಸಲು ಸರ್ಕಾರ ನಿರ್ಧರಿಸಿದೆಯೇ,

ಋ) ಈ ಕಾರ್ಖಾನೆಗೆ ವ್ಯವಸ್ಥಾಪಕ ನಿರ್ದೇಶಕರನ್ನು ಇತ್ತೀಚೆಗೆ ಸರ್ಕಾರ ನೇಮಿಸಿದೆಯೇ,

ಋ) ನೇಮಿಸಿದ್ದಲ್ಲಿ ಅವರು ಯಾವಾಗಿನಿಂದ ಅಧಿಕಾರ ವಹಿಸಿಕೊಂಡಿದ್ದಾರೆ,

ಎ) ಈ ಕಾರ್ಖಾನೆಯ ಜಾಗವನ್ನು ಜಂಟಿ ಸಹಭಾಗಿತ್ವದಲ್ಲಿ ನೀಡಲು ಸರ್ಕಾರ ನಿರ್ಧರಿಸಿದೆಯೇ ಹಾಗೂ ಇದರಿಂದ ಉಂಟಾಗುವ ಪ್ರಯೋಜನಗಳೇನು?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು)

ಅ) ದಿ 31–3–2007ರವರೆಗೆ ರೂ 186 61 ಕೋಟಿ

ಆ) 21 ಎಕರೆ 9 ಗುಂಟೆ

ಇ) ಸುಮಾರು ರೂ 125 ಕೋಟಿ

ಈ) ಕಾರ್ಖಾನೆಯಲ್ಲಿದ್ದ ನೌಕರರ ಸಂಖ್ಯೆ 1556 ಈಗ ಕಾರ್ಖಾನೆಯಲ್ಲಿ ಯಾವುದೇ ನೌಕರರಿರುವುದಿಲ್ಲ

ಉ) ಹಳೆಯ ಯಂತ್ರೋಪಕರಣಗಳು, ರೂಢಿಯಿಲ್ಲದ ಯಂತ್ರ ವಿಜ್ಞಾನ, ಕಚ್ಚಾ ಪದಾರ್ಥಗಳ ಬೆಲೆ ಏರಿಕೆ, ಮಾರುಕಟ್ಟೆಯಲ್ಲಿ ತೀವ್ರ ಪೈಪೋಟಿ ಇತ್ಯಾದಿ ಕಾರಣಗಳಿಂದ ನಷ್ಟ ಉಂಟಾಗಿದೆ

ಊ) ಇಲ್ಲ

ಋ) ಹೌದು